JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ರಾಘವಾಂಕನ 'ಹರಿಶ್ಚಂದ್ರಕಾವ್ಯ'ದಲ್ಲಿ'ಹೊಲೆತನ'ದ ಪ್ರಶ್ನೆ

**ಅರ್ಪಿತ.ಎಂ**
ಉಪನ್ಯಾಸಕಿ
ಕನ್ನಡ ವಿಭಾಗ
ಮಂಗಳೂರು ವಿಶ್ವವಿದ್ಯಾಲಯ
ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ
ಚಿಕ್ಕ ಅಳುವಾರ, ಕೊಡಗು

ಭಾರತೀಯ ಸಂಪ್ರದಾಯಸ್ಥ ಸಮಾಜದಲ್ಲಿ ಕುಲ ಅಥವಾ ಜಾತಿಗೆ ತುಂಬಾ ಮಹತ್ವದ ಸ್ಥಾನವಿದೆ. ವೇದಗಳ ಕಾಲದಿಂದ ಪ್ರಸ್ತುತದ ಕಾಲದವರೆಗೆ ಕುಲ ಅಥವಾ ಜಾತಿಗಳನ್ನು ಬಿಟ್ಟು ಬದುಕುವುದು ಸಾಧ್ಯವಾಗುತ್ತಿಲ್ಲ. ಕುಲ ಅಥವಾ ಜಾತಿ ಎಂಬುದು ಸಮಾಜವನ್ನುಒಂದು ವ್ಯವಸ್ಥೆಗೆ ಒಳಪಡಿಸುವ ಉದ್ದೇಶದಿಂದ ಪ್ರಾರಂಭವಾದದ್ದು ಆನಂತರದಲ್ಲಿ ಬಿಗಿ ಬಂಧನ ವ್ಯವಸ್ಥೆಯಾಗಿ ಮಾರ್ಪಟ್ಟಿತು."ಋಗ್ವೇದದ ಪುರುಷಸೂಕ್ತದಲ್ಲಿ ಮೊಟ್ಟ ಮೊದಲಿಗೆ ಮನುಷ್ಯನನ್ನು ವರ್ಣಗಳ ಹಿನ್ನಲೆಯಲ್ಲಿ ವಿಭಜನೆ ಮಾಡಿದ್ದು ಕಂಡುಬರುತ್ತದೆ ಎಂದು ಡಾ.ಎಂಚಿದಾನಂದಮೂರ್ತಿ ಹೇಳುತ್ತಾರೆ." ಡಿ ತಿಪ್ಪೇರುದ್ರಸ್ವಾಮಿ ಆದಿಯಾಗಿ ಹಲವಾರು ವಿದ್ವಾಂಸರು ಈ ಮಾತಿಗೆ ಒಪ್ಪಿಗೆ ಸೂಚಿಸುತ್ತಾರೆ. ಇದಕ್ಕೆ ನಿದರ್ಶನವೆಂಬಂತೆ ಪುರುಷಸೂಕ್ತದಲ್ಲಿರುವ ಮಂತ್ರ ಹೀಗಿದೆ.

**"ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂ ರಾಜನ್ಯಕೃತಃ**
**ಊರೂತದಸ್ಯಯದ್ವೈಶ್ಯಃ ಪದ್ಭ್ಯಾಂ ಶೂದ್ರೂಅಜಾಯತ"**

ಅಂದರೆ ಬ್ರಹ್ಮನ ಮುಖದಿಂದ ಬ್ರಾಹ್ಮಣ, ಭುಜಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ ಮತ್ತು ಪಾದಗಳಿಂದ ಶೂದ್ರರು ಅವಿರ್ಭವಿಸಿದ್ದಾರೆ ಎಂದರ್ಥ. ಋಗ್ವೇದದಲ್ಲಿ ನಾಲ್ಕು ವರ್ಣಗಳನ್ನು ಹೇಳಿದರೂ ಅದಕ್ಕೆ ಜನ್ಮಜಾತವಾದ ಜಾತಿಯನ್ನು ತಳುಹಾಕಿ ಒಂದು ವರ್ಣದಿಂದ ಮತ್ತೊಂದು ವರ್ಣಕ್ಕೆ ಯಾವುದೇ ಸಂಬಂಧಗಳು ಇರಬಾರದೆಂದು ಕಟ್ಟಳೆ ಹಾಕಿದ್ದು ಸ್ಮೃತಿಗಳ ಕಾಲದಲ್ಲಿ. ಹೀಗಾಗಿ ಮುಂದಿನ ಸಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿನೊಂದಿಗೆ ಜಾತಿಯನ್ನುವುದು ಅಂಟಿಕೊಂಡು ಬಂದಿತು.

ಬ್ರಾಹ್ಮಣನಾದವರು ಅಧ್ಯಾಪನ, ಅಧ್ಯಯನ, ಯಜನ-ಯಾಜನ, ದಾನಪಡೆದು ಕೊಳ್ಳುವುದನ್ನೂ, ಕ್ಷತ್ರಿಯನಾದವನು ಪ್ರಜೆಗಳ ರಕ್ಷಣೆ, ದಾನಕೊಡುವುದು, ಯಾಗ ಮಾಡುವುದನ್ನೂ ವೈಶ್ಯನಾದವನು ಪಶುಪಾಲನೆ, ವ್ಯಾಪಾರ ಮಾಡುವುದನ್ನೂ ಮಾಡಿದರೆ, ಉಳಿದ ಶೂದ್ರರು ಮೇಲಿನ ಮೂರು ವರ್ಣದವರ ಸೇವೆಯನ್ನು ಅನುಸೂಯೆಯಿಂದ ಮಾಡಬೇಕಿತ್ತು. ಹೀಗೆ ಮನುಷ್ಯನನ್ನು ಜಾತಿಯ ಬಲೆಯಲ್ಲಿ ಸಿಲುಕಿಸಿ ಸಂಬಂಧಗಳಿಂದ ದೂರವಿಟ್ಟರು. ಇದನ್ನೇ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಯಜಮಾನಿಕೆಯನ್ನು ಹೊರೆಯಲು ಮುನ್ನಡಿಸಿಕೊಂಡು ಬಂದರು.

"ಈ ನಾಲ್ಕು ವರ್ಣಗಳ ಮಿಗಿಲಾಗಿ ಮತ್ತೊಂದು ಪಂಗಡವನ್ನು ಗುರುತಿಸಲಾಗುತ್ತದೆ. ಈ ಪಂಗಡಕ್ಕೆ ಚಾತುರ್ವರ್ಣದಲ್ಲಿ ಸ್ಥಾನವಿರಲಿಲ್ಲ ಹೀಗಾಗಿ ಅವರನ್ನು ಅವರ್ಣೀಯರು, ಪಂಚಮರು, ಚಾಂಡಾಲರೂ, ಹೊಲೆಯರು ಎಂಬ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು". ಈ ತೆರನಾದ ವಿಂಗಡಣೆಯಿಂದ ಸಮಾಜದಲ್ಲಿ ಶೋಷಣೆಗಳು ತಲೆಯೆತ್ತಿದವು. ಮನುಷ್ಯನ ಹುಟ್ಟಿಗೂ ಜಾತಿಗೂ ಕರ್ಮದ ಹೊದಿಕೆ ಹೊದಿಸಿ ಕಂದಾಚಾರವನ್ನು ಜಾರಿಗೆತರಲಾಯಿತು. ಇದು ಸ್ಮೃತಿಗಳ ಕಾಲದಿಂದ ಇವತ್ತಿನವರೆಗೂ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ.

12ನೇ ಶತಮಾನದಲ್ಲಿ ವಚನಕಾರರು 'ಹೊಲೆತನದ ಪ್ರಶ್ನೆ'ಯನ್ನುಎತ್ತಿಕೊಂಡು ಚರ್ಚಿಸಿರುವುದು ಗಮನಾರ್ಹ ಸಂಗತಿ. ಯಾರು ಹೊಲೆಯರು ಎಂಬುದಕ್ಕೆ **"ಕೊಲ್ಲುವವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ...., ಸಕಲ ಜೀವಾತ್ಮರಿಗೆ ಲೇಸನೇ ಬಯಸುವವಕೊಡಲ ಶರಣರುಕುಲಜರು"** ಎನ್ನುವುದುಉತ್ತಮ. ಈ ಧರ್ಮ ಕೇವಲ ಆತ್ಮಗುಣವನ್ನೆ ಪ್ರಾಣವನ್ನಾಗಿ ಇರಿಸಿಕೊಂಡು ಬದುಕಿದವರು. ಜಾತಿಎನ್ನುವುದು ಕೇವಲ ಹುಟ್ಟಿನಿಂದ ಬಂದುದಲ್ಲ ಸತ್ಯನಿಷ್ಠೆಗಳಿಂದ, ಸಕಲ ಜೀವಾತ್ಮನರಿಗೆ ಲೇಸನೇ ಬಯಸುವವರ ನಡವಳಿಕೆಯಿಂದ ಬಂದದ್ದು ಎಂಬುದನ್ನು ಎತ್ತಿಹಿಡಿದಿದ್ದಾರೆ. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವ ಭಕ್ತರೆಲ್ಲರನು ಒಂದೇ ಎಂಬೆ' ಎನ್ನುವ ಸಮಾನತಾ ದೃಷ್ಟಿಯನ್ನು ಪ್ರಸಾರ ಮಾಡಿತು. ಈ ಒಂದು ನೈತಿಕ ಮೌಲ್ಯವನ್ನೇ ರಾಘವಾಂಕ ತನ್ನ 'ಹರಿಶ್ಚಂದ್ರಕಾವ್ಯ'ದಲ್ಲಿ ತಂದಿದ್ದಾನೆ.

ಹೊಲೆತನದ ಪ್ರಶ್ನೆಯನ್ನು ರಾಘವಾಂಕ ತನ್ನ 'ಹರಿಶ್ಚಂದ್ರಕಾವ್ಯ' ಎತ್ತಿಕೊಂಡಿದ್ದರೂ ಅವನು ಸಮಸ್ಯೆಯನ್ನು ನೋಡಿರುವ ರೀತಿ ವಚನಕಾರರ ರೀತಿಗಿಂತ ಭಿನ್ನವಾಗಿದೆ. ವಚನಕಾರರ ದೃಷ್ಟಿ ಈ ಒಂದು ಪ್ರಶ್ನೆಯನ್ನು ಬಿಡಿಸುವುದರಲ್ಲಿ ಮುಖ್ಯವಾಗಿ ಸಾಮಾಜಿಕವಾದದ್ದು. ಹೊಸ ಧರ್ಮವೊಂದರ ನೆಲೆಯ ಮೇಲೆ ವರ್ಗರಹಿತ ಸಮಾಜವನ್ನು ನಿರ್ಮಿಸಬೇಕೆಂದು ಹೊರಟ ವಚನಕಾರರು ಸಾಮಾಜಿಕವಾಗಿ 'ಹೊಲೆಯ' ಎಂಬ ವರ್ಗವೇ ಇರಕೂಡದು ಅಂಥದೊಂದು ವರ್ಗಇದೆ ಎಂದು ಭಾವಿಸುವುದು

ಆಧ್ಯಾತ್ಮವಾಗಿಯೂ ಅಸಂಗತವಾಗುತ್ತದೆ ಎಂದು ನಂಬಿದ್ದರು. ಆದರೆ 'ಹರಿಶ್ಚಂದ್ರಕಾವ್ಯ'ದಲ್ಲಿ ರಾಘವಾಂಕ 'ಹೊಲೆಯ, ಹೊಲೆತನ'ಗಳ ವಿಚಾರವನ್ನು ಕೇವಲ ತಾತ್ವಿಕವಾಗಿ ಚರ್ಚಿಸಿದ್ದಾನೆ. ಇವು ಸಾಮಾಜಿಕ ಸ್ತರವನ್ನೂ ಅದಕ್ಕೆ ಸಂಬಂಧಿಸಿದ ವೃತ್ತಿಯನ್ನೂ ಪ್ರತಿನಿಧಿಸುವುದಕ್ಕಿಂತ ಮನಸ್ಸಿನ ಸ್ವಭಾವ ಹಾಗೂ ಪ್ರವೃತ್ತಿಯನ್ನು ಪ್ರತಿನಿಧಿಸುತ್ತವೆ. ಆದ್ದರಿಂದಲೆಆತ ಹರಿಶ್ಚಂದ್ರಕಾವ್ಯದ ಕಡೆಯಲ್ಲಿ "ಅತಿ ಹುಸಿವಯತಿ ಹೊಲೆಯ, ಹುಸಿಯದಿಹ ಹೊಲೆಯ ಉನ್ನತಯತಿವರನ್ನು ಎಂದು ಸಾಕ್ಷಾತ್ ಶಿವನ ಬಾಯಲ್ಲಿ ಹೇಳಿಸಿದ್ದಾರೆ. "ಹರಿಶ್ಚಂದ್ರಕಾವ್ಯವು ವರ್ಣವ್ಯವಸ್ಥೆಯ ಬಗ್ಗೆ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತದೆಯಾದರೂ ಅದರ ಮುಖ್ಯ ನೆಲೆ ವೈದಿಕ ಸಂಸ್ಕೃತಿಯದು" ಎಂಬುದು ಕಾವ್ಯದ ನೆಲೆಯನ್ನು ಎತ್ತಿಹಿಡಿಯುತ್ತದೆ. ಕಾವ್ಯ ವರ್ಣವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತದೆ. ಹಾಗೂ ಕುಲ ಮತ್ತು ಕುಲಾಚಾರಗಳನ್ನಾಧರಿಸಿದ ತಾರತಮ್ಯಗಳನ್ನು ಪ್ರಶ್ನಿಸುವುದಿಲ್ಲ. ಹೀಗಾಗಿ ವಚನಕಾರರು ಹಾಗೂ ಹರಿಹರನ ಮೂಲಕ ವ್ಯಕ್ತವಾಗುತ್ತಿದ್ದ ಸಮಾನತೆಯ ಅಂಶಗಳು ರಾಘವಾಂಕನಲ್ಲಿ ಕಾಣುವುದಿಲ್ಲ.

ಹರಿಶ್ವಂದ್ರ ಕಾವ್ಯದಲ್ಲಿ ಬರುವ ಮಾಯದ ಬಲೆಯರ ಪ್ರಸಂಗ ಮೊಟ್ಟ ಮೊದಲಿಗೆ ಜಾತಿಯ ಚರ್ಚೆಯನ್ನು ಮುಂದಿದುತ್ತದೆ. ಈ ಪ್ರಸಂಗ ರಾಘವಾಂಕನ ಸ್ವತಂತ್ರ ಸೃಷ್ಟಿ. ಹೀಗಾಗಿ ತನ್ನಕಾಲದ ಪರಿಸರವನ್ನು ಗಮನದಲ್ಲಿಟ್ಟುಕೊಂಡಿರುವ ಕವಿ ಆ ಸಮಾಜದಲ್ಲಿ ಬೇರು ಬಿಟ್ಟಿರುವ ಸ್ಪೃಶ್ಯ–ಅಸ್ಪೃಶ್ಯತೆಯ ಚರ್ಚೆಗೆ ಇಳಿದು ಬಿಡುತ್ತಾನೆ ಮತ್ತು ಮೇಲ್ಜಾತಿಯವರ ಪರವಾಗಿ ನಿಲ್ಲುತ್ತಾನೆ. ಇಲ್ಲಿ ಬಂದಿರುವ ಪ್ರತಿ ಮಾತುಗಳು ತೂಕಬದ್ದವಾಗಿ ಚರ್ಚೆಯನ್ನು ಪ್ರಾರಂಭಿಸುತ್ತದೆ. ಇದೊಂದು ರೀತಿಯ ಸಂವಾದ. ಹೀಗಾಗಿ ಪರ ವಿರೋಧ ನೆಲೆಗಳೆರಡೂ ಅತ್ಯಂತ ಸೂತ್ರಬದ್ಧವಾಗಿ ಮೂಡಿದೆ.

ಬೇಟೆಯಿಂದಾದ 'ಆಯಾಸ ಪರಿಹರಿಸಿಕೊಳ್ಳಲು ಹರಿಶ್ಚಂದ್ರ ಬೀಡುಬಿಟ್ಟ ಸಂದರ್ಭದಲ್ಲಿ ವಿಶ್ವಾಮಿತ್ರನ ಆಣತಿಯಂತೆ ಮಾಯದ ಬಲೆಯರು ಅಲ್ಲಿಗೆ ಬಂದು ದಂಡಿಗೆಯ ಹಿಡಿದು ಮಧುರವಾದ ಗಾಯನದಿಂದ ಹರಿಶ್ಚಂದ್ರನನ್ನು ಸಂತೋಷ ಪಡಿಸುತ್ತಾರೆ. ಆಗ ಹರಿಶ್ವಂದ್ರ 'ಸರ್ವಾಭರಣಂಗಾನಗಾಣಿಯರಿಗಿತ್ತನು' ಇದಕ್ಕೆ ತೃಪ್ತಿಕೊಳ್ಳದ ಅವರು "…..ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು" ಈ ಮಾತಿಗೆ ಪ್ರತಿಯಾಗಿ "ರವಿಕುಲದ ರಾಜರಿಗೆ ಪಟ್ಟಾಭಿಷೇಕದ ಸಂದರ್ಭದಲ್ಲಿ ಕೊಡುವ ರಾಜಲಾಂಛನ ಇದನ್ನು ಕೊಡಲು ಸಾಧ್ಯವೇ?" ಎಂದು ನಿರಾಕರಿಸಿದಾಗ 'ನೀನೆಮಗೆ ವಲ್ಲಭನಾಗಿ ಚಿತ್ತದುಮ್ಮಳಿಕೆಯ ಕಳೆ…." ಎನ್ನುವುದರಿಂದಲೇ ಜಾತಿಯ ಅಥವಾ ಹೊಲೆತನದ ಮಾತಿನ ಯುದ್ಧ ಪ್ರಾರಂಭ.

**"ಲಲಿತಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯ**
**ಕುಲದರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ**
**ಬಲದೊಳೊರೆಯೆನಿಸಿ ಕನ್ನಿಕೆಯರಂಕೊಡುವ ಭೂಪರಿಲ್ಲಿಂದುತನಕ**
**ಹೊಲತಿಯರು ಒಂದಾವು ಸತಿಯರಾದಪ್ಪೆವೆಂ**
**ಬುಲಿಹವೆಂಬುದು ಬಂದಕಾಲಗುಣವೋ ನಿಂದ**
**ನೆಲೆದಗುಣವೋ ನೋಡುನೋಡೆಂದು ಕಡುಮುಳಿದು ಕೋಪಿಸಿದನವನೀಶನು"**

ಈ ಮಾತುಗಳು ಹರಿಶ್ಚಂದ್ರನ ಅಹಂಕಾರದ ಠೇಂಕಾದಿಂದ ಬಂದಿದೆ. ತಾನೆ ಶ್ರೇಷ್ಠನೆಂದುಕೊಳ್ಳುವ ವ್ಯಕ್ತಿ ಬೇರೆಯವರನ್ನು ಯಾವುದೇ ಕಾರಣಕ್ಕೂ ಶ್ರೇಷ್ಠ ಎಂದು ಒಪ್ಪಿಕೊಳ್ಳುವುದಿಲ್ಲ. ಆ ಮಾಯದ ಬಲೆಯರ ಬಯಕೆಯನ್ನು ಚಿಗುರಿನಲ್ಲಿಯೇ ಚಿವುಟಿ ಹಾಕುವ ಕೆಲಸ ಇಲ್ಲಿ ನಡೆದಿದೆ. ಅದಕ್ಕೆ ಒಂದೇ ಕಾರಣ ಆ ಮಾಯದ ಬಲೆಯರು 'ಹೊಲತಿಯ'ರೆಂಬುದು. ಇಲ್ಲಿ ಕುಲದ ಘನತೆಗಿಂತ ಸ್ವಪ್ರತಿಷ್ಠೆಯೇ ಮುಖ್ಯವಾಗಿ ಬಿಡುತ್ತದೆ. ಯಾಕೆಂದರೆ ಯಾವ ಸ್ಮೃತಿ ಶಾಸ್ತ್ರದಲ್ಲಿಯೂ ಕೂಡ ಕೀಳು ಕುಲದ ಹೆಣ್ಣನ್ನು ವಿವಾಹವಾಗಬಾರದೆಂದು ನಿಷೇಧವಿಲ್ಲ ಎಂಬುದು ಮನುಧರ್ಮ ಶಾಸ್ತ್ರದಲ್ಲಿ ಈ ಬಗ್ಗೆ ಉಲ್ಲೇಖವಿದೆ.

**"ಶೂದ್ರೈವ ಭಾರ್ಯ ಶೂದ್ರಸ್ಯ ಸಾಚ ಸ್ವಾಚ ವಿಶಃ ಸ್ಮೃತೇ**
**ತೇಚಸ್ವಾ ಚೈವ ರಾಜ್ಞಶ್ಚತಾಶ್ಚಚಾಗ್ರಜನ್ಮನಃ"**

ಅಂದರೆ ಶೂದ್ರನಿಗೆ ಶೂದ್ರ ಹೆಣ್ಣು ಮಾತ್ರ ವಿವಾಹವಾಗಲು ಅರ್ಹಳು. ವೈಶ್ಯನಿಗೆ ವೈಶ್ಯ ಮತ್ತು ಶೂದ್ರಜಾತಿ ಹೆಣ್ಣುಗಳನ್ನು, ಕ್ಷತ್ರಿಯರಿಗೆಕ್ಷತ್ರಿಯ ಹೆಣ್ಣಲ್ಲದೇ ವೈಶ್ಯ ಮತ್ತು ಶೂದ್ರ ಹೆಣ್ಣನ್ನು ವಿವಾಹವಾಗಲು ಅರ್ಹರು, ಆದರೆ ಬ್ರಾಹ್ಮಣನಿಗೆ ಬ್ರಾಹ್ಮಣ ಹೆಣ್ಣಲ್ಲದೆ ಕ್ಷತ್ರಿಯ, ವೈಶ್ಯ, ಶೂದ್ರ ಈ ಮೂರುಜಾತಿಯ ಹೆಣ್ಣುಗಳನ್ನು ಮದುವೆಯಾಗಲು ಅವಕಾಶವಿದೆ ಹಾಗೂ ಅರಸರೂ ಬಹುಪತ್ನಿತ್ವ ಹೊಂದುವ ಅವಕಾಶವಿದ್ದರೂ ಹರಿಶ್ಚಂದ್ರ ಕನ್ಯೆಯರನ್ನು ಜಾತಿಯ ಕಾರಣದಿಂದಾಗಿ ಅವಮಾನವೆಸಗಿ ವಿವಾಹವಾಗಲು ನಿರಾಕರಿಸಿ ಸಂಕಷ್ಟಕ್ಕೆ ಸಿಲುಕುತ್ತಾನೆ.

ರಾಘವಾಂಕ ವಾದವನ್ನು ಮುಂದುವರೆಸಿ ಕನ್ಯೆಯರಿಂದಲೇ ಹೊಲೆತನದ ಪ್ರಶ್ನೆಯನ್ನು ಎತ್ತಿಸಿ ಮನುಷ್ಯನಿಗೆ ಜಾತಿ ಅಥವಾ ಕುಲಗಳ ಇರುವುದಿಲ್ಲ ಎಂಬ ತರ್ಕಬದ್ಧ ವಾದವನ್ನು ಮುಂದಿಡುತ್ತಾರೆ.

**"ಪಾವನ ಕ್ಷೀರಮಂಕೊಡುವ ಕೆಚ್ಚಲ ಮಾಂಸ**
**ವಾವಲೇಸಿನಿದುಳ್ಳ ಮಧುವನೊಸೆದೀವ ನೊಳ**
**ವಾವಲೇಸಧಿಕಕಸ್ತೂರಿಯಂಕೊಡುವ ಮೃಗನಾಭಿತಾನಾವ ಲೇಸು**
**ದೇವರಿಗೆ ಸಲ್ಲವೇ ಉತ್ತಮಗುಣಂಗಳಿ**
**ರ್ದಾವಕುಂದಂ ಕಳೆಯಲಾರಿವವನೀಶ ಕೇಳ್**
**ಭಾವಿಸುವೊಡಿಂದಮ್ಮರೂಪುಜವ್ವನವಿರಲುಕುಲದ ಮಾತೇಕೆಂದರು"**

ಮನುಷ್ಯನ ಜೊತೆ ಸಂಬಂಧ ಬೆಳೆಸಬೇಕಾದರೆ ಹುಟ್ಟು ಮಹತ್ವದಲ್ಲ ಎಂಬ ಮಾಯದ ಬಲೆಯರ ಮಾತು ಅರ್ಥಗರ್ಭಿತವಾಗಿ ಧ್ವನಿಸುತ್ತದೆ. ಪವಿತ್ರವಾದ ಹಾಲನ್ನು ನೀಡುವ ಕೆಚ್ಚಲು ಮಾಂಸ, ಜೇನುರಸವನ್ನು ನೀಡುವುದು ಜೇನುಹುಳು, ಕಸ್ತೂರಿಯನ್ನು ನೀಡುವಕಸ್ತೂರಿ ಮೃಗದನಾಭಿ ಲೇಸಲ್ಲವೆಂದು ಬಯಸಿ ಅವುಗಳಿಂದ ಉತ್ಪತ್ತಿಯಾದ

ವಸ್ತುಗಳನ್ನು ತ್ಯಜಿಸುತ್ತೇವೆಯೇ? ಹಾಲು, ಮಧು ಮತ್ತು ಕಸ್ತೂರಿ ಈ ಮೂರು ದೇವರಿಗೆ ಸಲ್ಲತಕ್ಕಂತಹ ವಸ್ತುಗಳೇ ಆಗಿವೆ. ಕನ್ಯೆಯರ ಮಾತಿನಲ್ಲಿ ವೈಚಾರಿಕ ಪ್ರಬುದ್ಧತೆ ಎದ್ದುಕಾಣತ್ತದೆ. ಅವರು ವಿಶ್ವಾಮಿತ್ರನ ಸೃಷ್ಟಿಯಾಗಿದ್ದರಿಂದ ಎಲ್ಲವನ್ನು ತಿಳಿದಿದ್ದರು ಎಂಬುದು ದಿಟ. ಇವರಲ್ಲಿ ಈ ಗುಣಇಲ್ಲದೇ ಹೋಗಿದ್ದರೆ ಅವರು ಹರಿಶ್ಚಂದ್ರ ಒಬ್ಬ ರಾಜನಾಗಿರುವುದರಿಂದ ಆತನಿಗೆತಾವು ವಿದೇಯಾರಾಗಿರಬೇಕೆಂದುಕೊಂಡಿದ್ದರೆ, ಹರಿಶ್ಚಂದ್ರ ಕೋಪದಲ್ಲಿ ಅವರನ್ನು ಹೊಡೆಯುವುದು ಸಂಕಷ್ಟಕ್ಕೆ ಸಿಲುಕುವುದು ನಡೆಯುತ್ತಲೇ ಇರಲಿಲ್ಲ.

ಹರಿಶ್ಚಂದ್ರನ ಪಾಲಿಗೆ ಹೊಲೆತಿಯರು'ಬಚ್ಚಲ ನೀರಿನಂತೆ, ನಾಯಿಯ ಮೊಲೆಯ ಹಾಲಿನಂತೆ, ಪ್ರೇತವನದೊಳಗೆ ಬೆಳೆದ ಹೂವಿನಂತೆ' ಎಂಬ ಮಾತುಗಳು ಬಸವಣ್ಣನವರ "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದಯ್ಯಾ, ನಾಯಿಯ ಮೊಲೆಯ ಹಾಲು ನಾಯಿಗಲ್ಲದೇ ಪಂಚಾಮೃತಕ್ಕೆ ಸಲ್ಲದಯ್ಯ" ಎಂಬುದನ್ನು ಇಲ್ಲಿ ನೆನಪಿಗೆ ತಂದದ್ದಾದರೂ ಆಭಾವಕ್ಕೂ ಈ ಭಾವಕ್ಕೂ ಬಹಳಷ್ಟು ವ್ಯತ್ಯಾಸಗಳಿವೆ. ಇದು 12ನೇಶತಮಾನದ ಸಾಮಾಜಿಕ ಪರಿಸರದಲ್ಲಿ ಕುಲದ ಬಗ್ಗೆ ಇದ್ದ ಮನೋಭಾವನೆ ವ್ಯಕ್ತವಾಗಿದೆ.

"......ಅನುಲೋಮ ಮತ್ತು ಪ್ರತಿಲೋಮ ವಿವಾಹಗಳು 11ನೇ ಶತಮಾನಕ್ಕಿಂತ ಮುಂಚಿತವಾಗಿ ಚಾಲ್ತಿಯಲ್ಲಿತ್ತೇ ವಿನಃ ಈ ವೇಳೆಗಾಗಲೇ ಸಂಪೂರ್ಣವಾಗಿ ಕಣ್ಮರೆಯಾಗಿತ್ತು"[13]. ಈ ಕಾರಣಕ್ಕಾಗಿಯೇ ರಾಘವಾಂಕ ಹರಿಶ್ಚಂದ್ರನ ಮೂಲಕ ಅನುಲೋಮ ವಿವಾಹವನ್ನು ವಿರೋಧಿಸಿದ್ದಾನೆ. ಎಲ್ಲಾ ಕಾಲದ ಸಮಾಜಿಕ ವ್ಯವಸ್ಥೆಯಲ್ಲಿ ಒಂದು ಕುಲದ ಬಗ್ಗೆ ಇರುವ ಮನೋಧರ್ಮವನ್ನೇ ಹರಿಶ್ಚಂದ್ರನಿಗೆ ತಾನೂ ಸಾಮಾಜಿಕವಾಗಿ-ಆರ್ಥಿಕವಾಗಿ ಉಚ್ಚವರ್ಗಕ್ಕೆ ಸೇರಿದವನೆಂಬ ಪ್ರಜ್ಞೆಯೇ ಪ್ರಧಾನವಾಗಿದೆ ಮತ್ತು ಸಹಜವೂ ಆಗಿದೆ. ತಾನು ಉತ್ತಮ ವಂಶದವನು, ಚರ್ಕವರ್ತಿ ಎಂಬ ಹೆಮ್ಮೆಯಲ್ಲಿ ಬದುಕುವ ಹರಿಶ್ಚಂದ್ರನಿಗೆ ಕಾವ್ಯದ ಉದ್ದಕ್ಕೂ ಸ್ಪರ್ಧಿಯಾಗುವುದೂ ಸಾಮಾಜಿಕವಾಗಿ ಅತ್ಯಂತ ಕೆಳಸ್ತರವೆಂದು ಭಾವಿಸಲಾಗಿರುವ ಹೊಲೆಯರೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆಯಿಂದ. ಯಾವುದೇ ಪರಿಸರದ ಒಂದು ನಿಯಮ ಒಬ್ಬರಿಗೆ ಪರವಾಗಿದ್ದರೆ ಮತ್ತೊಬ್ಬರಿಗೆ ವಿರೋಧವಾಗಿಯೇ ಕಾಣಿಸುತ್ತದೆ. ವ್ಯಕ್ತಿಯಿಂದ-ವ್ಯಕ್ತಿಗೆ, ಸಮಾಜದಿಂದ-ಸಮಾಜಕ್ಕೆ ಹಂತಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ರಾಘವಾಂಕ ಇದನ್ನು ಗಮನಿಸಿದ್ದಾನೆ ಅದಕ್ಕಾಗಿ ಕನ್ಯೆಯರ ಮೂಲಕ ಹೊಲೆತನವನ್ನು ಪ್ರತಿರೋಧಿಸಿದ್ದಾನೆ.

**"ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ**
**ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲರೂಪನೇ**
**ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ**
**ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ**
**ನಾಡೆ ಹೊಲೆಯಿಲ್ಲ ಸೋಂಕಿಗೆ ಹೊಲೆಯುಂಟಾಯ್ತೆ**
**ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮಮೊಂದಧಿಕವೆಎಂದರು"**

ಜಾತಿಗೆ ಸಂಬಂಧಪಟ್ಟಂತೆ ಜಾತಿಗಳನ್ನು ವಿರೋಧ ಮಾಡುವ ನಿಟ್ಟಿನಲ್ಲಿ ಈ ಮಾತುಗಳಿಗೆ ಪ್ರಾಮುಖ್ಯತೆ ಇದೆ. 'ಅವರೆತ್ತಿದ ಪ್ರಶ್ನೆಗಳು ಎಷ್ಟೊಂದು ಸಹಜ, ಸ್ವಾಭಾವಿ ಹಾಗೂ ವಾಸ್ತವಿಕವಾಗಿವೆ. ಇವುಗಳಿಗೆ ಮರುತ್ತರಿಸುವ 'ಎದೆ' ಯಾರಿಗಿದೆ? ಅರಸ ಇದರಿಂದ ತತ್ತರಿಸುತ್ತಾನೆ. ಕನ್ಯೆಯರು ವಾದವನ್ನು ಬಿಡದೆ ಮುಂದುವರಿಸಿ 'ಶಾಪದಿಂದ ಆಗುವ ದುಷ್ಕುಲವು, ಸತ್ಕುಲ ರಾಜನ ಸಂಗಡದಿಂದ ಶುದ್ಧವಾಗುವುದು ಎಂಬ ಅಪೇಕ್ಷೆಯಿಂದ ಬಂದೆವು' ಎಂದಾಗ ಕೂಡಲೇ ಹರಿಶ್ಚಂದ್ರ 'ನಿಮಗೋಸ್ಕರ ನನ್ನ ಕುಲವನ್ನು ಕೆಡಿಸುವೆನೆ?'ಎನಲು ಕನ್ಯೆಯರು ವಚನಕಾರರಂತೆ ವೈಚಾರಿಕವಾಗಿ'ಪಾಪಿಗಳ ಪಾಪವನ್ನು ತೊಳೆಯುವ ಗಂಗೆಗೆ ಲೇಪನವುಂಟಾಯ್ತೆ? ಹೇಳು ಅರಸ' ಎಂಬ ಮಾತು ಹೊಲೆತನವೆಂಬುದು ಹುಟ್ಟಿನಿಂದ ಬರುವುದಲ್ಲ ಗುಣದಿಂದ ಬರುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಕನ್ಯೆಯರು ಬೆಂಬಿಡದೆಪೀಡಿಸಲೂ ಹರಿಶ್ಚಂದ್ರ ತಾಳ್ಮೆ ಕಳೆದುಕೊಂಡು ಕನ್ಯೆಯರ ಮೇಲೆ ಕೈ ಮಾಡುತ್ತಾನೆ.

ಕನ್ಯೆಯರನ್ನು ಹೊಡೆದಟ್ಟಿದ ಮೇಲೆ ವಿಶ್ವಾಮಿತ್ರನೇ ಬಂದು ತನ್ನ ಪುತ್ರಿಯರನ್ನು ವಿವಾಹವಾಗೆಂದಾಗ ಮತ್ತೆ ಕುಲದ ವಿಚಾರ ಪ್ರಸ್ತಾಪವಾಗುತ್ತದೆ. "ಉತ್ತಮ ರವಿಕುಲದೊಳುದಿಸಿ ಚಾಂಡಾಲತ್ವವೆತ್ತಿ ಸತಿಯರ್ಗಳಸಿ ಘೋರ ನರಕಾಳಿಗೆ ಅನಿಮಿತ್ತ ಹೋಹವನಲ್ಲ" ಎಂದೂಕಡೆಗೆ "ತನ್ನ ಸರ್ವಸ್ವವನ್ನಾದರೂ ಕೊಟ್ಟೇನು ಹೊಲೆತಿಯರನ್ನು ಮಾತ್ರ ಮದುವೆಯಾಗಲಾರೆ" ಎಂದೂ ಘೋಷಿಸುತ್ತಾನೆ. ತಾನು ಉತ್ತಮ ಕುಲಜನೆಂಬ ವಂಶ ಪ್ರತಿಜ್ಞೆಯ ಪ್ರತಿಷ್ಠೆಗೆ ಬಿದ್ದರಾಜ, ಕನ್ಯೆಯರನ್ನು ಕುಲದ ನೆಲೆಯಲ್ಲಿ ಕೀಳಾಗಿ ಕಂಡದ್ದಕ್ಕೆತನ್ನ ಸರ್ವಸ್ವವನ್ನು ಕಳೆದುಕೊಂಡು ರಾಜ್ಯದಿಂದ ಚ್ಯುತನಾಗಿ, ಹರಿಶ್ಚಂದ್ರ ಪರಿವಾರ ಸಮೇತರಾಗಿ ಕಾಶಿನಗರಕ್ಕೆ ಬಂದು ನಿಲ್ಲುತ್ತಾನೆ.

ವಿಶ್ವಾಮಿತ್ರನ ಋಣವನ್ನು ತೀರಿಸುವ ಸಲುವಾಗಿ ತಮ್ಮನ್ನು ತಾವೇ ಮಾರಿಕೊಳ್ಳುವ ಸಂದರ್ಭ ಮನ ಮಿಡಿಯುತ್ತದೆ. ಈ ಸಂದರ್ಭದಲ್ಲಿಯೂ ಜಾತಿಯ ಅಥವಾ ಹೊಲೆತನದ ಪ್ರಶ್ನೆ ಬರುತ್ತದೆ. ತನ್ನ ಸತಿ-ಸುತರನ್ನು ಮಾರಿದಾಗಲೂ ವಿಶ್ವಾಮಿತ್ರರ ಋಣ ಸಂದಾಯವಾಗದಿದ್ದಾಗ ತನ್ನನ್ನು ತಾನು ಮಾರಿಕೊಳ್ಳಲು ಹರಿಶ್ಚಂದ_ಕೂಗುತ್ತಾನೆ. ಆ ಕೂಗು ಕೇಳಿ ಆತನನ್ನು ಖರೀದಿಸಲು ಸಂಬಳಗೋಲು ಹಿಡಿದು ವೀರಬಾಹುಕ ಅಲ್ಲಿಗೆ ಬರುತ್ತಾನೆ. ಇಲ್ಲಿ 'ಸಂಬಳಗೋಲು' ತಳವರ್ಗದ ಉಡುಪಿನ ಸಂಕೇತವಾಗಿ ಕಂಡುಬರುತ್ತದೆ. ವೀರಬಾಹುಕ ಕೀಳು ಕುಲದವನಾಗಿದ್ದರೂ ಆರ್ಥಿಕ ದೃಷ್ಟಿಯಿಂದ ಮೇಲ್ವರ್ಗಕ್ಕೆ ಸೇರಿದವನೇ ಆಗಿದ್ದಾನೆ. ಬಹುಶಃ ಕಾಶಿಯಲ್ಲಿ ರಾಜನನ್ನ ಬಿಟ್ಟರೆ ವೀರಬಾಹುಕನೇ ಶ್ರೀಮಂತನಾಗಿದ್ದನು. ಆ ಕಾರಣಕ್ಕಾಗಿ ಹರಿಶ್ಚಂದ್ರನು ಕೇಳಿದಷ್ಟು ಹೊನ್ನು ನೀಡಿಆತನನ್ನು ಖರೀದಿಸುತ್ತಾನೆ.

'ಹೊಲೆತನ' ಎಷ್ಟರ ಮಟ್ಟಿಗೆ ಹರಿಶ್ಚಂದ್ರನ ಮನಸ್ಸನ್ನ ಹೊಕ್ಕಿತೆಂದರೆ ತನ್ನ ಸಹಾಯಕ್ಕೆಂದು ಬಂದ ವೀರಬಾಹುಕನನ್ನು ಹೊಲೆಯನೆಂದು ತಿಳಿದು ಹರಿಶ್ಚಂದ್ರ ಆತನಿಗೆ ಮಾರಾಟವಾಗಲು ನಿರಾಕರಿಸುತ್ತಾನೆ.

**"ನಡುಗದಂಜದೆ ಹೆದರಿದೊಸರಿಸದಕಟಕಟ**
**ಕಡೆಯ ಹೊಲೆಯಂ ಮೇರೆದಪ್ಪಿ ಬಂದೆನ್ನತ**

**ನ್ನೊಡೆಯಂಗೆ ದಾಸನಾಗೀಗಳೆಂದಂಬುದಿದು ಕಾಲಗುಣವೋಎನ್ನನು**

**ಎಡೆಗೊಂಡಕರ್ಮಫಲವೋ ಕಡೆಗೆ ಮೆಣಸು ಹುಳಿ**

**ತಡೆ ಜೋಳದಿಂ ಕುಂದೆ ನೋಡು ನೋಡೆಂದುಘುಡು**

**ಘುಡಿಸಿ ಕೋಪಾಟೋಪದಿಂಜರಿದುರ್ಝುಕಿಸಿದನವನಿಪನನಾಮಿಕನನು"**

ಹರಿಶ್ಚಂದ್ರ ಕುಲದ ಬಗ್ಗೆ ಇಟ್ಟುಕೊಂಡ ಅತಿಯಾದ ವ್ಯಾಮೋಹವೇ ಆತನ ಮುಳುವಿಕೆಗೆ ಮೂಲವಾಗಿದೆ. ಸೂರ್ಯವಂಶದಲ್ಲಿ ಹುಟ್ಟಿದ ತನ್ನನ್ನು 'ಕಡೆಯ ಹೊಲೆಯಂ ಮೇರೆದಪ್ಪಿ ಬಂದೆನ್ನತನ್ನೊಡೆಯನಿಗೆ ದಾಸನಾಗೀಗಳೆಂಬುದಿದು ಕಾಲಗುಣವೋ ಎಡೆಗೊಂಡಕರ್ಮ ಫಲವೋ" ಎಂದು ಕಳವಳಿಸಿತ್ತಾನೆ. ಇಲ್ಲಿಯೂ ಹರಿಶ್ಚಂದ್ರ ಬಳಸುವ 'ಕಡೆಯ ಹೊಲೆಯಂ' ಮತ್ತು 'ಮೇರೆದಪ್ಪ ಬಂದು' ಎಂಬ ಎರಡು ಮಾತುಗಳಲ್ಲಿನ ಪ್ರಕ್ರಿಯೆಯನ್ನು ಪರಿಭಾವಿಸಬೇಕು ಅವನು ರಾಜ್ಯ ಬಿಟ್ಟು ನಿರ್ಗತಿಕನಾದರೂ ತಾನು ಸಮಾಜಿಕ ಅಧರ್ಮದ ಅನಾಮಿಕನಿಗಿಂತ ಶ್ರೇಷ್ಠ ಎಂಬ ದುರಭಿಮಾನ ತಾಳುತ್ತಾನೆ.

ಅವನ ಪಾಲಿಗೆ ವೀರಬಾಹುಕ 'ಕಡೆಯ ಹೊಲೆಯ' ಸಮಾಜದ ಕಟ್ಟಕಡೆಯ ನೆಲೆಯಲ್ಲಿರಬೇಕಾದವನು; ಅಂಥವನು 'ಮೆರೆದಪ್ಪಿ' ಯಾವ ಮಿತಿಯಲ್ಲಿ ಬದುಕಬೇಕೋ ಆ ಸಮಾಜಿಕ ಮಿತಿಯನ್ನು ಮೀರಿ ಬರಬಹುದೇ ಎನ್ನುವ ತಿರಸ್ಕಾರವೇ ಈ ಪ್ರತಿಕ್ರಿಯೆಯಲ್ಲಿ ಪ್ರಧಾನವಾಗಿದೆ. ಇದು ಹೊಲೆಯರನ್ನು ಕುರಿತ ಸಮಾಜದಲ್ಲಿದ್ದ ಕೀಳು ಭಾವನೆ ಹಾಗೂ ಹೊಲೆಯರೂ ಎಂದರೆ 'ಊರ ಹೊರಗಿರಬೇಕು' ಎಂಬ ಅನಿಷ್ಟ ಪದ್ಧತಿಯ ಪ್ರತೀಕವಾಗಿದೆ. ಇದೆ ಮನಸ್ಥಿತಿ ಹರಿಶ್ಚಂದ್ರನಲ್ಲಿಯೂ ತುಂಬಿತ್ತು. ಸಕಲ ಜೀವರಾಶಿಯನ್ನು ಸಮಾನ ದೃಷ್ಟಿಯಿಂದ ನೋಡಬೇಕಾದ ಪ್ರಜಾಪಾಲಕನೆ ಜಾತಿ ತಾರತಮ್ಯ ಮಾಡಿ ತನ್ನ ವ್ಯಕ್ತಿತ್ವಕ್ಕೆ ದಕ್ಕೆ ತಂದುಕೊಳ್ಳುತ್ತಾನೆ.

ಈ ನಿರಾಕರಣೆಯಿಂದ ಕ್ಷುದ್ರಗೊಂಡ ವೀರಬಾಹುಕ ಹರಿಶ್ಚಂದ್ರನ ವರ್ತನೆಯನ್ನು ಖಂಡಿಸಿ ತೆಗಳಿ ಮಾತನಾಡುತ್ತಾನೆ. ಮಾರಿಕೊಳ್ಳಲು ಸಿದ್ಧನಾದ ವ್ಯಕ್ತಿ ಕೇವಲ ಜಾತಿಯನ್ನು ಮುಂದು ಮಾಡಿಕೊಂಡು, ಕುಲದ ಕಾರಣಕ್ಕಾಗಿಯೇ ಒಪ್ಪುತ್ತಿಲ್ಲವೆಂಬುದು ವೀರಬಾಹುಕನಿಗೆ ತಿಳಿದು ಬಿಟ್ಟಿದೆ. ಆದರೆ ವೀರಬಾಹಿಕನಿಗೆ ಕೀಳು ಕುಲದ ಕೀಳರಿಮೆ ಎಲ್ಲಿಯೂ ಕಾಡಿದಂತಿಲ್ಲ. ಆರ್ಥಿಕವಾಗಿ ಸಬಲನಾದ ವ್ಯಕ್ತಿಗೆ ಅದು ಅವಶ್ಯಕವೂ ಅಲ್ಲ. ಆದರೆ ಯಾವಾಗ ಕುಲದ ಕುರಿತಾಗಿ ಹರಿಶ್ಚಂದ್ರನ ಬಾಯಿಂದ 'ಕಡೆಯ ಹೊಲೆಯ' ಎಂಬ ಮಾತುಗಳು ಬರುತ್ತದೆಯೋ ಆವಾಗ ಸಹಜವಾಗಿ ಕೋಪಗೊಂಡು

**"ಕೀಳಾರು ಮೇಲಾರು ಹದುಳಪ್ಪ ನಾನು ಚಾಂ**

**ಡಾಳನೋ ಹುಸಿಯ ಹೊಲೆಯಂ ಹೊರವ ನೀನು ಚಾಂಡಾಲನೋ"**

ಎಂದು ವೀರಬಾಹುಕನೇ ಬಂದು 'ಮೇಲಾರು ಕೀಳಾರು?'ಎಂಬ ಮೂಲಭೂತ ಪ್ರಶ್ನೆಯನ್ನೆತ್ತಿಕೊಂಡ. ಅಂತಹ ಎದೆಗಾರಿಕೆ ಒಬ್ಬ ಚಾಂಡಾಲನಿಗಿತ್ತು. ಇದು ಅಚ್ಚರಿ ಸಂಗತಿಯೇ ಸರಿ. ಆದರೆ 13ನೇ ಶತಮಾನದ ಸಾಮಾಜಿಕ ವರ್ಗಗಳು ಯಾವುದೇ ಜಾತಿಗಳಿಗೆ ಸೀಮಿತವಾಗಿರಲಿಲ್ಲ ಎಂಬುದು ಕೂಡ ಇದರಿಂದ ತಿಳಿದು ಬರುತ್ತದೆ.

ವೀರಬಾಹುಕ 'ಕಡೆಯ ಹೊಲೆಯ'ನೆಂಬ ಪ್ರಶ್ನೆಯನ್ನೆತ್ತಿಕೊಂಡು "ಉಳ್ಳವರು ಯಾರಾದರೂ ನನ್ನನ್ನು ಕೊಂಡುಕೊಳ್ಳಬೇಕೆಂದು ನೀನು ಸಾರಿದೆಯೇ ಹೊರತು, ಉತ್ತಮ ದ್ವಿಜರು ಕೊಂಡುಕೊಳ್ಳಬೇಕೆಂದು ಸಾರಲಿಲ್ಲ. ಹೀಗಿರುವಾಗ ಹುಸಿಯ ಹೊಲೆಯನ್ನು ಹೊತ್ತ ನೀನು ಚಾಂಡಾಲನೋ ನನ್ನ ಪಾಡಿಗೆ ನಾನು ಇರುವ ನನ್ನಂಥವನು ಚಾಂಡಾಲನೋ" ಎಂದು ಪ್ರಶ್ನಿಸಿದಾಗ ಹರಿಶ್ಚಂದ್ರ ತನ್ನ ತಪ್ಪಿನ ಅರಿವಾಗಿ ತೆಪ್ಪಗಾಗುತ್ತಾನೆ. "ರವಿಕುಲಕೆ ಕುಂದಿಂದು ಬಂದಡೆಂ ಬರಲಿ" ಎಂದು ತನ್ನ ಕುಲದ ಹೆಮ್ಮೆಯನ್ನು ಕಳಚಿ ನಿಲ್ಲುತ್ತಾನೆ. ಹರಿಶ್ಚಂದ್ರ ವೀರಬಾಹುಕನ ಮಾತಿಗೆ ತೆಪ್ಪಗಾದದ್ದು ಅವನು ಅನಿವಾರ್ಯತೆಗೆ ಶರಣಾದದ್ದರ ಸೂಚನೆಯೇ ಹೊರತು ಆತನಲ್ಲಿ 'ಹೊಲೆಯ'ರೆಂಬ ಸಾಮಾಜಿಕ ವರ್ಗದ ಬಗೆಗೆ ಒಂದು ಬಗೆಯ ತಾತ್ವಿಕ ಜ್ಞಾನೋದಯವಾಯಿತೆಂಬುದರ ಸೂಚಕವಲ್ಲ. ಹರಿಶ್ಚಂದ್ರನಿಗೆ ಕಡೆಗೂ ಈ 'ಸಾಮಾಜಿಕ ಸ್ತರ'ವನ್ನು ಕುರಿತು ಒಂದು ಸಮಾನತಾ ದೃಷ್ಟಿ ಲಭಿಸಿತೆನ್ನುವ ಸೂಚನೆ ಎಲ್ಲೂ ಬರುವುದಿಲ್ಲ.

ಹರಿಶ್ಚಂದ್ರ ಮೊದಲಿನಿಂದಲೂ ತನ್ನ ವಂಶ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವ ವಿಫಲವಾದ ಹೋರಾಟದಲ್ಲಿ ತಾನು ಮಾನಸಿಕವಾಗಿ ಯಾವ ಸಾಮಾಜಿಕ ಸ್ತರದ ಬಗೆಗೆ ಕೀಳು ಎಂಬ ಭಾವನೆಯನ್ನು ತಿಳಿದಿದ್ದನೋ ಅದನ್ನೇ ಕಟ್ಟಕಡೆಗೆ ಒಪ್ಪಿಕೊಳ್ಳುವ ಅನಿವಾರ್ಯತೆಗೆ ಬದ್ಧನಾಗಬೇಕಾಯಿತೆಂಬುದನ್ನು ರಾಘವಾಂಕನು ಚಿತ್ರಿಸಿದ್ದಾನೆಯೆ ಹೊರತು ಅವನ ವ್ಯಕ್ತಿತ್ವದ ವಿಕಾಸದಲ್ಲಿ ಸತ್ಯಸಾಧಕರಿಗೆ ಇರಬೇಕಾದ 'ಸಮಾನತಾ ದೃಷ್ಟಿ'ಯನ್ನ ಹರಿಶ್ಚಂದ್ರನಲ್ಲಿ ಅನುಭೂತವಾಯಿತೆಂಬುದನ್ನು ಖಚಿತವಾಗಿ ಎಲ್ಲಿಯೂ ಸೂಚಿಸಿಲ್ಲ. ಏಕೆಂದರೆ ರಾಘವಾಂಕ ಈ ಪ್ರಶ್ನೆಯನ್ನು ಚರ್ಚಿಸಿರುವುದು ತಾತ್ವಿಕ ದೃಷ್ಟಿಯಿಂದಲೇ ಹೊರತು ಸಮಾಜಿಕ ದೃಷ್ಟಿಯಿಂದಲ್ಲ, ಹರಿಶ್ಚಂದ್ರ ತನ್ನ ಸತ್ಯ ಸಾಧನೆಯಲ್ಲಿ ಅಧಿಕಾರ, ಐಶ್ವರ್ಯ, ಕುಲದ ಹಮ್ಮು, ಮದಡಿ-ಮಗನನ್ನು ಕಳೆದುಕೊಳ್ಳುವ ತನ್ನ ವ್ಯಕ್ತಿತ್ವದ ಒಂದೊಂದು ಆವರಣಗಳನ್ನು ಕಳಚಿಕೊಂಡು 'ಬತ್ತಲಾಗುವ' ಕ್ರಿಯೆಯನ್ನು ಸಮರ್ಥವಾಗಿ ಸಂಕೇತಿಸುತ್ತದೆ.

ಹೀಗೆ ಕುಲದ ಹೆಮ್ಮೆಯಿಂದ ಕಳಚುವ ಕ್ರಿಯೆಗೆ ಗಾಣಗಾಣಿಯರ ಮತ್ತು ವೀರಬಾಹುಕನ ಪ್ರಸಂಗ ಸಹಾಯಕವಾಗಿದೆ. ಆದರೆ ವಚನಕಾರರ ವಿಚಾರಕ್ರಾಂತಿಯ ನಂತರ ಬಂದ ರಾಘವಾಂಕ, ತನ್ನ ಕಥಾನಾಯಕನಲ್ಲಿ ವಚನಕಾರರ 'ಹೊಲೆತನದ' ಬಗ್ಗೆ ತಿಳಿದ ನಿಲುವನ್ನು ಆತನ ವ್ಯಕ್ತಿತ್ವದ ಕಟ್ಟಕಡೆಯ ಘಟ್ಟದಲ್ಲಾದರೂ ಚಿತ್ರಿಸದೆ ಇದದ್ದು ಆಶ್ಚರ್ಯ ಹಾಗೂ ವಿಷಾದದ ಸಂಗತಿಯಾಗಿದೆ.

ಒಟ್ಟಾರೆಯಾಗಿ ರಾಘವಾಂಕ ತನ್ನ 'ಹರಿಶ್ಚಂದ್ರ ಕಾವ್ಯ'ದಲ್ಲಿ "ಹೊಲೆತನದ ಪ್ರಶ್ನೆ' ಹರಿಶ್ಚಂದ್ರನಿಗೆ ಹೊಲೆತಿಯರಾದ ಗಾಣರಾಣಿಯರಿಂದ ಮೊದಲು ಪ್ರಸ್ತಾಪವಾಗುವ ಮದುವೆಯ ಆಹ್ವಾನವೇ ಕಡೆಗೆ ಅವನು ವೀರಬಾಹುಕನ ಆಳಾಗಿ ಹೊಲೆಯರಿಗೆ ಉಚಿತವಾದ ಚಾಂಡಾಲತ್ವವನ್ನು ಕೈಗೊಳ್ಳುವವರೆಗೂ ಅಟ್ಟಿಸಿಕೊಂಡು ಹೋಗಿರುವುದು ಗಮನಾರ್ಹವಾಗಿದೆ. ಸಮಾಜಿಕವಾಗಿ ಹಾಗೂ ವಾಂಶಿಕವಾಗಿ ಉಚ್ಚವರ್ಗದ ಪ್ರತಿಷ್ಠಿತ ವ್ಯಕ್ತಿಯಾದ ಹರಿಶ್ಚಂದ್ರ ತಾನು ಯಾವ ಸಾಮಾಜಿಕ ಸ್ತರವನ್ನು ಕಾವ್ಯದ ಉದ್ದಕ್ಕೂ ನಿಕೃಷ್ಟವೆಂದುಕೊಂಡನೋ ಅದೇ ಸಮಾಜಿಕ ಸ್ತರಕ್ಕೆ ಮುಟ್ಟುವ ಅನಿವಾರ್ಯತೆಯಲ್ಲಿ ಆತನ ವಂಶ ಪ್ರಜ್ಞೆಯ ಹಾಗೂ ಅಹಂಕಾರದ ನಿರಸನಗಳು ಈ ಕೃತಿಯಲ್ಲಿ ಕ್ರಮಬದ್ಧವಾಗಿ ಚಿತ್ರಿತವಾಗಿದೆ. 'ಇರುಳ ಬೆಳಗುವ ಚಂದ್ರನಲ್ಲಿಯೂ ಒಂದಂಶ ಕಳಂಕವಿರುವಂತೆ. ಸತ್ಯ ಪರಿಪಾಲನೆಗೆ ಹೆಸರಾದ ರಾಘವಾಂಕನ ಹರಿಶ್ಚಂದ್ರನಲ್ಲಿಯೂ ಜಾತಿ ತಾರತಮ್ಯದ ಕಳಕಂಕದ ಒಂದಂಶ'ವನ್ನು ಈ ಕೃತಿಯಲ್ಲಿ ಕಾಣಬಹುದು.

**ಪರಾಮರ್ಶನ ಗ್ರಂಥಗಳು:**


1. ಡಾ. ಎಂ ಚಿದಾನಂದ ಮೂರ್ತಿ ಎಂ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, 2015
2. ಡಾ. ಬಾಬಸಾಹೇಬ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ–7, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1998
3. ಸೀತಾರಾಮಯ್ಯ ವಿ: ರಾಘವಾಂಕ(ಹರಿಶ್ಚಂದ್ರ ಕಾವ್ಯ), ಬೆಂಗಳೂರು: ಸ್ವಪ್ನ ಬುಕ್ ಹೌಸ್
4. ನುಗಡೋಣಿ ಅಮರೇಶ (ಸಂ): ಹರೀಶ್ಚಂದ್ರ ಚಾರಿತ್ರ: ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ, 2006
5. ನವರತ್ನ (ಅನು): ಮನುಸ್ಮೃತಿ, ಧಾರವಾಡ: ಸಮಾಜ ಪುಸ್ತಕಾಲಯ 2003
6. ಬಸವರಾಧ್ಯ ಎನ್ ಮತ್ತು ಪಂಡಿತ ಬಸವ ಎಸ್(ಸಂ): ಹರಿಶ್ಚಂದ್ರ ಕಾವ್ಯಂ, ಮೈಸೂರು: ಗೀತಾ ಬುಕ್ ಹೌಸ್ 1993
7. ರಂಗನಾಥಶರ್ಮ ಎನ್: ರಾಘವಾಂಕ ಹರಿಶ್ಚಂದ್ರ ಕಾವ್ಯ(ಗಧ್ಯಾನುವಾದ), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್,2010
8. ಡಾ. ಭಟ್ಟ ಜಿ.ಎಸ್. (ಪ್ರ.ಸಂ): ಷಟ್ಪದಿ ಸಾಹಿತ್ಯ, ಮೈಸೂರು: ಚೇತನ ಯುಗಾಂತರ ಕನ್ನಡ ಸಾಹಿತ್ಯ